ಓ.ಎಸ್. ನಂ.105/2022
ಪಿಡಬ್ಲು-1

ದಿನಾಂಕ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ನಾನು ಹೆಬ್ಬೆಟ್ಟಿನ ಸಹಿ ಮಾಡುತ್ತೇನೆ. ಈ ದಾವೆಯಲ್ಲಿ ನಾನು ವಂಶಾವಳಿ ಹಾಕಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಯಮುನಪ್ಪ ಮತ್ತ ಆತನ ತಂದೆ ಜಮೀನು ಎಂದರೆ ಸರಿಯಲ್ಲ. ನಮ್ಮ ಮನೆತನಕ್ಕೆ ಯಮುನಪ್ಪ ತಂದೆ ಮಲ್ಲಪ್ಪ ಸಂಬಂಧವಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ದಿನಾಂಕ 02.03.2001 ರಲ್ಲಿ ವಾರಸಾ ಆಗಿರುತ್ತವೆ ಎಂದರೆ ಸರಿ. ದಾವಾ ಸ್ವತ್ತುಗಳು ನಿಮಗೆ ಸಂಬಂಧಪಟ್ಟಿವೆ ಎಂದು ತೋರಿಸಲು ನಿಮಗೆ ವಂಶಾವಳಿ ಹಾಜರುಪಡಿಸಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ಇರಲಿಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳ ಚತರು ಸೀಮೆಗಳು ಸರಿಯಾಗಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತವಾಗಿ ಭೀಮಬಾಯಿ ಗಂಡ ಮಲ್ಲಪ್ಪ ಜೀವಂತವಿಲ್ಲ ಎಂದರೆ ಸರಿ. ಭೀಮಬಾಯಿ ಮೃತಪಟ್ಟು ಒಂದು ವರ್ಷವಾಗಿರುತ್ತದೆ. ನನ್ನ ತಾಯಿ ಭೀಮಾಬಾಯಿ ಹೆಸರಿನಲ್ಲಿ ಯಾವುದೆ ಜಮೀನುಗಳಿಲ್ಲ ಎಂದರೆ ಸರಿಯಲ್ಲ. ಆದರೆ ಅವುಗಳ ಸರ್ವೆ ನಂಬರ ಮತ್ತು ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನನ್ನ ತಾಯಿ ಭೀಮಾಬಾಯಿ ಹೆಸರಿನಲ್ಲಿ ಯಾವುದೆ ಜಮೀನುಗಳಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತವಾಗಿ ದಾವಾ ಸ್ವತ್ತುಗಳು ಭೀಮವ್ವ, ಗಂಗಾಬಾಯಿ, ಮಲ್ಲಪ್ಪರವರ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳು ವಾರಸಾ ಆದ ಬಗ್ಗೆ ನಾನು ಕಂದಾಯ ಇಲಾಖೆಯಲ್ಲಿ ಯಾವುದೆ ಅಪೀಲು ಸಲ್ಲಿಸಿಲ್ಲ ಎಂದರೆ ಸರಿ. ಭೀಮವ್ವ, ಗಂಗಾಬಾಯಿ, ಮಲ್ಲಪ್ಪರವರ ಹೆಸರಿನಲ್ಲಿ ವಾರಸಾ ಆದ ಬಗ್ಗೆ ಕಂದಾಯ ಇಲಾಖೆಯಲ್ಲಿ ಯಾವುದೆ ಅಪೀಲು ತೊಂದರೆ ಇರಲಿಲ್ಲ.

ನನ್ನ ಅಜ್ಜ ಭೀಮಶಾರವರು ಮೃತಪಟ್ಟ ನಂತರ 1975 ರಲ್ಲಿ ಮಲ್ಲಮ್ಮ ಗಂಡ ಭೀಮಶಾ ರವರ ಹೆಸರು ವಾರಸಾ ಪ್ರಕಾರ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಮಲ್ಲಮ್ಮ ತೀರಿಕೊಂಡ ನಂತರ ಶಿವಪ್ಪ ತಂದೆ ಭೀಮಶಾ ಮತ್ತು ಮಲ್ಲಪ್ಪ ತಂದೆ ಭೀಮಶಾರವರ ಹೆಸರಿನಲ್ಲಿ ವಾರಾಸಾ ಆಗಿರುತ್ತದೆ ಎಂದರೆ ಸರಿ. 1984 ರಲ್ಲಿ ಶಿವಪ್ಪ ಮತ್ತು ಮಲ್ಲಪ್ಪರವರ ಪಹಣಿಗಳು ಬೇರೆ ಬೇರೆ ಆಗಿರುತ್ತವೆ ಎಂದರೆ ಸರಿ. ಶಿವಪ್ಪರವರ ಪಾಲಿಗೆ ಬಂದ ಸ್ವತ್ತುಗಳಲ್ಲಿ ಆತನ ಮಕ್ಕಳು ಸ್ವತ್ತುಗಳಲ್ಲಿ ಸ್ವಾಧಿನತೆ ಇರುತ್ತಾರೆ ಎಂದರೆ ಸರಿ. 2000 ನೆ ಸಾಲಿನಲ್ಲಿ ಮಲ್ಲಪ್ಪ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಿಪಿ-8 ರ ಪ್ರಕಾರ ಮಲ್ಲಪ್ಪ ಮೃತಪಟ್ಟ ನಂತರ ದಾವಾಸ್ತಿಗಳು ಭೀಮವ್ವ ಗಂಡ ಮಲ್ಲಪ್ಪ, ಗಂಗಮ್ಮ ಗಂಡ ಮಲ್ಲಪ್ಪ, ಮಲ್ಲಪ್ಪ ತಂದೆ

ಯಮನಪ್ಪ ಹೆಸರುಗಳು ದಾಖಲಾಗಿರುತ್ತವೆ ಎಂದರೆ ಸರಿಂಯಲ್ಲ. ನಿಪಿ-8 ರ ಕಾಲಂ ನಂ.10 ರಲ್ಲಿ ಗೇಣಿ ನಾತೆಯಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ-8 ಗೇಣಿ ನಾತೆಯಿಂದ ಬಂದಿರುವುದರಿಂದ ಭೀಮಶಾ, ಮಲ್ಲಪ್ಪ, ಮಲ್ಲಮ್ಮ, ಭೀಮವ್ವರವರು ಕಂದಾಯ ಇಲಾಖೆಗೆ ಯಾವುದೆ premium ಹಣ ಕಟ್ಟಿಲ್ಲ ಎಂದರೆ ಸರಿಯಲ್ಲ. 1ನೆ ಪ್ರತಿವಾದಿ ರೂ.6956/- ಪ್ರೀಮಿಯಮ ಹಣವನ್ನು ದಿನಾಂಕ 30.06.2003 ರಂದದು ಚಲನ್ ನಂ.168 ರ ಮುಖಾಂತರ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರೀಮಿಯಮ ಹಣ ಕಟ್ಟಿದ್ದರಿಂದ 1 ಮತ್ತು 2ನೆ ಪ್ರತಿವಾದಿಯರು ಸರ್ವೆ ನಂ.45 ಕ್ಕೆ ನಿರುಪಾದಿಕ ಮಾಲಿಕರಾಗಿರುತ್ತಾರೆ ಎಂದರೆ ಸರಿಯಲ್ಲ.  ನಿಪಿ-8 ರ ಕಾಲಂ ನಂ.10 ರಲ್ಲಿ ಗೇಣಿ ನಾತೆಯಿಂದ ಬಂದಿರುವುದರಿಂದ ಬೇರೆ ಯಾರಿಗೂ ಮಾರಾಟ ಮಾಡಬಾರದ ಎಂದು ಪಹಣಿಯಲ್ಲಿ ಉಲ್ಲೇಖವಿರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಮಲ್ಲಪ್ಪ, ಭೀಮವ್ವ, ಗಂಗಮ್ಮರವರೆ ಸ್ವಾ ಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಮಲ್ಲಪ್ಪ ಮೃತಪಟ್ಟ ನಂತರ ಮಲ್ಲಪ್ಪ, ಭೀಮವ್ವ, ಗಂಗಮ್ಮರವರೆ ವಾರಸುದಾರರು ಎಂದರೆ ಸರಿಯಲ್ಲ. ನಾನು ಮಲ್ಲಪ್ಪನ ವಾರಸುದಾರ ಅಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಮದುವೆ ಕಾನೂನಿನಲ್ಲಿ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ಯಮನಪ್ಪನ ಮರಣಾನಂತರ ಪ್ರತಿವಾದಿಯರೆ ದಾವಾ ಸ್ವತ್ತಿನ ಸಂಪೂರ್ಣ ಮಾಲಿಕರು ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ಭೀಮುಬಾಯಿ ಮಲ್ಲಪ್ಪನವರ ಕಾನೂನು ಬದ್ದ ಹೆಂಡತಿ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಭೀಮಬಾಯಿ ಯಾವ ವರ್ಷದಲ್ಲಿ ಮದುವೆಯಾಗಿರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ನನ್ನ ತಂದೆ ಮೃತಪಟ್ಟ ನಂಬರ ಭೀಮಬಾಯಿ ಕಾನೂನುಬದ್ದ ಹೆಂಡತಿ ಎಂದು ಮತ್ತು ವಾದಿಯರು ಕಾನೂನುಬದ್ದ ವಾರಸುದಾರರೆಂದು ಕಾಲ ಪರಿಮಿತಿ ಅಧಿನಿಯಮದಲ್ಲಿ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ವಾರಸುದಾರ ಎಂದು ವಾರಸಾ ಹಾಜುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ದಾವೆಯಲ್ಲಿ ನನ್ನ ತಾಯಿ ಮೊದಲನೆ ಹೆಂಡತಿ ಎಂದು ಘೋಷಣೆ ಮಾಡುವಂತೆ ಪರಿಹಾರ ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ಮೊದಲನೆ ಹೆಂಡತಿ ಎಂದು ಸುಳ್ಳು ಹೇಳಿ ಪರಿಹಾರ ಪಡೆದುಕೊಳ್ಳಬೇಕೆಂದು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಭೀಮವ್ವ ಮೃತಪಟ್ಟ ನಂತರ ನನ್ನ ತಾಯಿ ಭೀಮಬಾಯಿ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭೀಮವ್ವ ಮೃತಪಟ್ಟಾಗ ಆಕೆಗೆ 90 ವರ್ಷಗಳಾಗಿದ್ದು ವಯೋ ಸಹಜ ಕಾಯಿಲೆಯಿಂದ ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-87 ಮತ್ತು 88 ರಲ್ಲಿನ ಜಮೀನುಗಳು ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಿಲ್ಲ

ಎಂದರೆ ಸರಿಯಲ್ಲ. ನಿಪಿ-87 ಮತ್ತು 88 ರಲ್ಲಿ ಎರಡು ಕಲ್ಲುಗಳನ್ನಿಟ್ಟು ಸುಳ್ಳು ಪೋಟೊಗಳನ್ನು ತೆಗೆಸಿರುತ್ತೇನೆ ಎಂದರೆ ಸರಿಯಲ್ಲ ಮತ್ತು ಅವುಗಳಲ್ಲಿ ಸರ್ವೆ ನಂಬರ ನಮೂದಿಸಿಲ್ಲ ಎಂದರೆ ಸರಿಯಲ್ಲ.

ನನ್ನ ದಾವೆಯಲ್ಲಿ ಭೀಮಬಾಯಿ ಕಾನೂನುಬದ್ದ ಹೆಂಡತಿ ಅಲ್ಲ ಎಂದು ಮತ್ತು ಮೃತ ಯಮನಪ್ಪ ಮಲ್ಲಪ್ಪರವರ ಓರಸ ಪುತ್ರನಲ್ಲ ಎಂದು ನನ್ನ ದಾವೆಯಲ್ಲಿ ವಿವರಣೆ ನೀಡಿಲ್ಲ ಎಂದರೆ ಸರಿಯಲ್ಲ. ಮೃತ ಭೀಮವ್ವ ಮತ್ತು ಯಮುನಪ್ಪರವರ ವಿರುದ್ಧ ಈ ಮೊದಲು ದಾವೆ ಹಾಕಲು ಏನಾದರೂ ತೊಂದರೆ ಇತ್ತಾ ಎಂದರೆ ಇರಲಿಲ್ಲ ಎಂದು ಹೇಳುತ್ತಾರೆ.

ವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ